19	ಬಿಜಾಪುರ	1275
20	ಧಾರವಾಡ	862
21	ಕಾರವಾರ	827
22	ಹಾವೇರಿ	993
23	ಗದಗ	854
24	ಬಾಗಲಕೋಟೆ	1567
25	ಗುಲ್ಬರ್ಗಾ	1227
26	ರಾಯಚೂರು	1108
27	ಬೀದರ್	996
28	ಬಳ್ಳಾರಿ	1203
29	ಕೊಪ್ಪಳ	670
30	ಯಾದಗಿರಿ	704
	ಒಟ್ಟು	**38430**

ಅಡಿಕೆ ಮತ್ತು ತೆಂಗು ಬೆಳೆ ನಷ್ಟಕ್ಕೆ ಸರಕಾರದ ಪರಿಹಾರ

275(546); ಶ್ರೀ ಹ್ಯಾರಿಸ್ ಎಸ್.ಎ. (ಶಾಂತಿನಗರ)

ಅ) ಬರಗಾಲದ ಪರಿಣಾಮ ಮತ್ತು ವಿವಿಧ ರೋಗಗಳಿಂದಾಗಿ ತೆಂಗಿನ ಬೆಳೆ ನಾಶವಾಗಿದ್ದು ಕೊಳೆರೋಗದಿಂದ ಅಡಿಕೆ ಬೆಳೆಗೆ ಅಪಾರ ಹಾನಿಯಾಗಿರುವುದರಿಂದಾಗಿ ರೈತರಿಗೆ ಉಂಟಾದ ಅಂದಾಜು ನಷ್ಟ ಎಷ್ಟು;

ಆ) ರಾಜ್ಯದಲ್ಲಿ ತೆಂಗು ಮತ್ತು ಅಡಿಕೆ ಬೆಳೆಯುವ ಪ್ರದೇಶಗಳ ವಿಸ್ತೀರ್ಣದ ಪ್ರಮಾಣವೆಷ್ಟು; ಕಳೆದ ಮೂರು ವರ್ಷಗಳಲ್ಲಿ ಅಡಿಕೆ ಮತ್ತು ತೆಂಗು ಬೆಳೆಗಳ ಪ್ರಮಾಣದ ಕುರಿತು ವಿವರಗಳೇನು;

ಇ) ಅಡಿಕೆ ಮತ್ತು ತೆಂಗು ಬೆಳೆ ನಷ್ಟದಿಂದ ತತ್ತರಿಸಿದ ರೈತರುಗಳಿಗೆ ವಿಷೇಶ ಪ್ಯಾಕೇಜ್ ರೂಪಿಸಲಾಗಿದೆಯೇ; ಹೌದಾದಲ್ಲಿ ಆ ಕುರಿತಾದ ವಿವರಗಳೇನು ಕೇಂದ್ರ ಸರ್ಕಾರದವರು ಪರಿಹಾರದ ಕುರಿತು ಸಹಯೋಗದೊಂದಿಗೆ ಕೈಗೊಂಡ ಕಾರ್ಯಕ್ರಮಗಳೇನು?

ಡಾ॥ ಶ್ಯಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ)

- ಬರಗಾಲದ ಪರಿಣಾಮ ಮತ್ತು ವಿವಿಧ ರೋಗಗಳಿಂದಾಗಿ ತೆಂಗು ಬೆಳೆ ಹಾನಿಯಾಗಿರುವುದರಿಂದ ಅಂದಾಜು ₹ 724.548 ಕೋಟಿಗಳ ಮೊತ್ತದಷ್ಟು ನಷ್ಟವಾಗಿದೆ (ವರ್ಷ 2013–14).
- ಕೊಳೆರೋಗದಿಂದ ಅಡಿಕೆ ಬೆಳೆಯಲ್ಲಿ ಅಂದಾಜು ₹ 760.84 ಕೊಟಿಗಳ ಮೊತ್ತದಷ್ಟು ನಷ್ಟವಾಗಿದೆ (ವರ್ಷ 2013–14)

ಆ)

- ರಾಜ್ಯದಲ್ಲಿ ತೆಂಗು ಬೆಳೆಯನ್ನು 4,93 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮತ್ತು ಅಡಿಕೆ ಬೆಳೆಯನ್ನು 2,37 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗಿದೆ.
- ಕಳೆದ ಮೂರು ವರ್ಷಗಳ ಅಡಿಕೆ ಮತ್ತು ತೆಂಗು ಬೆಳೆಗಳ ಪ್ರಮಾಣದ ಕುರಿತು ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

(ವಿಸ್ತೀರ್ಣ:ಹೆಕ್ಟೇರ್ ಗಳಲ್ಲಿ; ಉತ್ಪಾದನೆ: ಟನ್‌ಗಳಲ್ಲಿ)

ಬೆಳೆ	2009–10		2010–11		2011–12	
	ವಿಸ್ತೀರ್ಣ	ಉತ್ಪಾದನೆ	ವಿಸ್ತೀರ್ಣ	ಉತ್ಪಾದನೆ	ವಿಸ್ತೀರ್ಣ	ಉತ್ಪಾದನೆ
ಅಡಿಕೆ	215572	318996	227716	366177	2,37,656	390230
ತೆಂಗು	487075	52667 ಲಕ್ಷ ಕಾಯಿಗಳು	491337	52844 ಲಕ್ಷ ಕಾಯಿಗಳು	4,93,323	58230 ಲಕ್ಷ ಕಾಯಿಗಳು

ಇ) ಹೌದು

- ಅಡಿಕೆ ಬೆಳೆ ನಷ್ಟದಿಂದ ತತ್ತರಿಸಿದ ರೈತರುಗಳಿಗೆ ಸಹಾಯಧನ ನೀಡಲು ಕೇಂದ್ರ ಸರ್ಕಾರಕ್ಕೆ NHM ಮತಿಯಿಂದ ₹ 134.35 ಕೋಟಿಗಳ ಅನುದಾನಕ್ಕೆ ವಿಶೇಷ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ ಹಾಗೂ ಹಾನಿಗೊಳಗಾಗಿರುವ ತೆಂಗಿನ ತೋಟಗಳ ಪುನಶ್ಚೇತನಕ್ಕಾಗಿ ₹ 585.00 ಕೋಟಿಗಳ ವಿಶೇಷ ಪ್ಯಾಕೇಜ್‌ನ್ನು ಸಲ್ಲಿಸಲಾಗಿತ್ತು. ಆದರೆ, 2014–15 ನೇ ಸಾಲಿನ ಕೇಂದ್ರ ಸರ್ಕಾರವು ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕರಿಸಿ ಘಟಕ ವೆಚ್ಚವನ್ನು ಹೆಚ್ಚು ಮಾಡಿರುತ್ತದೆ, ಅದರಂತೆ ಕೇಂದ್ರ ಸರ್ಕಾರದ ತೆಂಗು ಅಭಿವೃದ್ಧಿ ಮಂಡಳಿಗೆ ₹ 893.46 ಕೋಟಿಗಳಿಗೆ ಪರಿಷ್ಕೃತ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

- 2013–14 ನೇ ಸಾಲಿನಲ್ಲಿ ಅಡಿಕೆಗೆ ಬೋರ್ಡೋ ದ್ರಾವಣ ಸಿಂಪರಣೆಗೆ ಅತಿ ಹೆಚ್ಚು ಮಳೆಯಾಗಿ ಕೊಳೆರೋಗ ತಗಲಿರುವ ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಿಗೆ ಸಸ್ಯ ಸಂರಕ್ಷಣಾ ಔಷಧಿಗಳ ಖರೀದಿಸಿದ ರೈತರಿಗೆ ಹೆಚ್ಚುವರಿ ಸಹಾಯಧನ ₹ 200.00 ಲಕ್ಷಗಳ ಅನುದಾನವನ್ನು ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಬಿಡುಗಡೆ ಮಾಡಲಾಗಿದೆ.

- ಕಂದಾಯ ಇಲಾಖೆಯ ಪ್ರಾಕೃತಿಕ ವಿಕೋಪ ಪರಿಹಾರ ನಿಧಿ (NCRF) ಯೋಜನೆ ಅಡಿಕೆ ಕೊಳೆರೋಗ ನಿಯಂತ್ರಣಕ್ಕಾಗಿ ಪರಿಕರ ಸಹಾಯಧನ (Input subsidy) ವನ್ನು ಪ್ರತಿ ಹೆಕ್ಟೇರ್‌ಗೆ ₹ 12,000/– ದಂತೆ ನೀಡಲು ಸಂಬಂಧಪಟ್ಟ ಜಿಲ್ಲೆಗಳಿಗೆ ಕಂದಾಯ ಇಲಾಖೆಯಿಂದ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ ಹಾಗೂ ಕಂದಾಯ ಇಲಾಖೆಯ ಮುಖಾಂತರ ಪರಿಹಾರ ಧನವನ್ನು ನಷ್ಟ ಅನುಭವಿಸಿದ ರೈತರಿಗೆ

ವಿತರಿಸಲು ಜಿಲ್ಲೆಗಳಲ್ಲಿ ಕ್ರಮವಹಿಸಲಾಗಿರುತ್ತದೆ (₹ 100.79 ಕೋಟಿಗಳು).

- ತೋಟಗಾರಿಕೆ ಇಲಾಖೆಯಿಂದ ರೈತರಿಗೆ ತೆಂಗಿನ ತೋಟಗಳ ಪುನಶ್ಚೇತನಕ್ಕಾಗಿ ಸಂಪೂರ್ಣವಾಗಿ ಒಣಗಿರುವ ತೆಂಗಿನ ತೋಟಗಳನ್ನು ಬುಡ ಸಮೇತ ಕಿತ್ತು ತೆಗೆದು ಪರ್ಯಾಯ ಬೆಳೆಗಳನ್ನು ಬೆಳೆಸುವುದು ಮತ್ತು ಭಾಗಶಃ ಹಾನಿಗೊಳಗಾದ ತೆಂಗಿನ ತೋಟಗಳಲ್ಲಿ ಮರುನಾಟಿ ಮಾಡುವುದು, ಮಿಶ್ರ ಬೆಳೆಗಳನ್ನು ಬೆಳೆಸುವುದು, ತೇವಾಂಶ ಸಂರಕ್ಷಣೆ ಕ್ರಮಗಳನ್ನು ಕೈಗೊಳ್ಳುವುದು, ಸಮಗ್ರ ಪೋಷಕಾಂಶ ನಿರ್ವಹಣೆ, ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣೆಗಾಗಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ (RKVY) ತೆಂಗು ಪುನಶ್ಚೇತನ ಕಾರ್ಯಕ್ರಮದಡಿ ಸಹಾಯಧನವನ್ನು ನೀಡಲಾಗುತ್ತಿದೆ (₹ 843.59 ಲಕ್ಷಗಳು).

ಕಾಮಗಾರಿಗಳಿಗಾಗಿ ಖರ್ಚು ಮಾಡಿದ ಮೊತ್ತ

276(433); ಶ್ರೀ ಜೀವರಾಜ್ ಡಿ.ಎನ್. (ಶೃಂಗೇರಿ)

ಅ) ಲೋಕೋಪಯೋಗಿ ಇಲಾಖೆಯ ವಿವಿಧ ಕಾಮಗಾರಿಗಳ ಅನುಷ್ಠಾನಕ್ಕಾಗಿ ಚಿಕ್ಕಮಗಳೂರು ಜಿಲ್ಲೆಗೆ ಕಳೆದ ಒಂದು ವರ್ಷದ ಅವಧಿಯಲ್ಲಿ ಖರ್ಚು ಮಾಡಿರುವ ಮೊತ್ತವೆಷ್ಟು;

ಆ) ಯಾವ ಯಾವ ಕಾಮಗಾರಿಗಳನ್ನು ಇದರ ಮೂಲಕ ಕೈಗೊಳ್ಳಲಾಗಿರುತ್ತದೆ; (ಕಾಮಗಾರಿಗಳವಾರು ಮೊತ್ತವಾರು ತಾಲ್ಲೂಕುವಾರು ವಿವರಗಳನ್ನು ನೀಡುವುದು;

ಇ) ಸದರಿ ಕಾಮಗಾರಿಗಳಿಗಾಗಿ ಯಾವ ಯಾವ ಲೆಕ್ಕಶೀರ್ಷಿಕೆಯಡಿ ಹಣ ಮಂಜೂರು ಮಾಡಲಾಗಿದೆ; ಇದರಲ್ಲಿ ಕೈಗೊಂಡ